KARNATAKA SANGHA QATAR

ಕರ್ನಾಟಕ ಸಂಘ, ಕತಾರ್

# ಶ್ರೀಗಂಧ

ಐದನೆಯ ವಿಶ್ವ ಕನ್ನಡ ಸಂಸ್ಕೃತಿ ಸಮ್ಮೇಳನದ ಕಿರು ವಿಶೇಷಾಂಕ

ಮಾರ್ಚ್ ೨೦೦೯

ಹೃದಯ ವಾಹಿನಿ





**ಕನಸಾದ ನನಸು..........ಕೃತಜ್ಞತೆಗಳು**

ನಮ್ಮ ಸಂಘವು ಹತ್ತನೆಯ ವರ್ಷದ ಹೊಸ್ತಿಲಲ್ಲಿ ಇರುವಾಗ ಈ ಒಂದು ಕನಸು ಅಂದರೆ ವಿಶ್ವಕನ್ನಡ ಸಮ್ಮೇಳನವನ್ನು ಆಯೋಜಿಸುವ ನಮ್ಮೆಲ್ಲರ ಕನಸು ನನಸಾಗಿರುವುದು ಅತ್ಯಂತ ಸಂತೋಷಕರವಾದ ವಿಷಯ. ಈ ಕನಸನ್ನು ನನಸಾಗಿಸಿದ ನನ್ನ ಸಂಘದ ಸದಸ್ಯರುಗಳಿಗೆ ಎಷ್ಟು ಕೃತಜ್ಞತೆ ಹೇಳಿದರೂ ಸಾಲದು. ಇವರೆಲ್ಲರ ಜೊತೆ ನಮ್ಮ ಸಂಘಕ್ಕೆ ನೆರವು ನೀಡಿದ ತುಳು ಕೂಟ-ಕತಾರ್, ಮಂಗಳೂರು ಕ್ರಿಕೆಟ್ ಕ್ಲಬ್ ಅಧ್ಯಕ್ಷರುಗಳಿಗೆ ನನ್ನ ಕೃತಜ್ಞತೆಗಳು. ನಮ್ಮ ಕರೆಗೆ ಓಗೊಟ್ಟು ಸಹಕರಿಸಿದ ಹೃದಯವಾಹಿನಿ ಪತ್ರಿಕೆ ಸಂಪಾದಕ ಮತ್ತು ಗೆಳೆಯ ಶ್ರೀ. ಮಂಜುನಾಥ್ ಸಾಗರ್ ಅವರನ್ನು ಎಷ್ಟು ಕೊಂಡಾಡಿದರೂ ಸಾಕಾಗದು. ಅವರು ಹೀಗೆಯೇ ಕನ್ನಡದ ಕಂಪನ್ನು ಇನ್ನಷ್ಟು ಹರಡಲಿ ಎಂದು ಹಾರೈಸುತ್ತೇನೆ.

ಧೀಮಂತ ಸಾಹಿತಿ ಪದ್ಮಶ್ರೀ ಡಾ.ಚಂದ್ರಶೇಖರ ಕಂಬಾರರು ನಮ್ಮ ಕರೆಗೆ ಓಗೊಟ್ಟು ನಮ್ಮನ್ನು ಆಶೀರ್ವದಿಸಿದ್ದಕ್ಕೆ ಕೃತಜ್ಞತೆಗಳು. ಈ ಸಮ್ಮೇಳನವನ್ನು ಯಶಸ್ವಿಯಾಗಿಸಲು ಕರ್ನಾಟಕದಿಂದ ಬಂದ ಎಲ್ಲಾ ಕಲಾ ಶಾಲೆಯ ವಿದ್ಯಾರ್ಥಿಗಳಿಗೆ ಹಾಗೂ ನಿರ್ದೇಶಕರಿಗೆ ನಮ್ಮ ಸಂಘದ ಪರವಾಗಿ ಕೃತಜ್ಞತೆಗಳು. ಕತಾರಿನ ಕರ್ನಾಟಕ ಸಂಘದ ಹಿರಿಮೆಯನ್ನು ಮೆರೆಸಿದ ಇತರ ಸಂಘಗಳಿಗೂ ನಮ್ಮ ನಮನ. ಪ್ರಾರಂಭದ ದಶಕದಲ್ಲಿ ಸಂಘವನ್ನು ಮುನ್ನಡೆಸಿದ ಹಿರಿಯರ ಕನಸನ್ನು ನನಸಾಗುವ ಪ್ರಯತ್ನ ಇಲ್ಲಿ ನಿರಂತರವಾಗಿ ಸಾಗಿದೆ. ಸಂಘಕ್ಕಾಗಿ ಒಂದು ದಶಕದಿಂದ ನೆರವು ನೀಡುತ್ತಾ ಪ್ರೋತ್ಸಾಹಿಸಿದ ಪ್ರಾಯೋಜಕ ಸಂಸ್ಥೆಗಳನ್ನು ನಾವು ನೆನಪಿಸಿಕೊಳ್ಳಲೇ ಬೇಕು.

ಸಂಘದಲ್ಲಿ ಐಕ್ಯತೆಯನ್ನು ಮೂಡಿಸಿ ಕೌಟುಂಬಿಕ ವಾತಾವರಣವನ್ನು ಸೃಷ್ಟಿಸಿ ಮುನ್ನಡೆಸುವ ಪ್ರಯತ್ನದಲ್ಲಿ ನಾವು ಯಶಸ್ವಿಗಳಾಗಿದ್ದೇವೆ ಎಂಬುದು ನನ್ನ ಭಾವನೆ. ಕರ್ನಾಟಕದಿಂದ ಕನ್ನಡಿಗನೇ ಸಾರ್ವಭೌಮನು ಎಂಬ ಮಾತನ್ನು ಎದೆ ತಟ್ಟಿ ಹೇಳಿ ಎಲ್ಲ ತಂದೆತಾಯಿಯರೂ ತಮ್ಮ ಮಕ್ಕಳೊಂದಿಗೆ, ಗೆಳೆಯರೊಂದಿಗೆ ಕನ್ನಡದಲ್ಲಿ ವ್ಯವಹರಿಸಲು ವಿನಂತಿ ಮಾಡುತ್ತಿದ್ದೇನೆ. ಕೊನೆಯದಾಗಿ ಸಂಘದ ಅಧ್ಯಕ್ಷನಾಗಿ ಜೀವನದ ಅತ್ಯಂತ ಗೌರವದ ಕ್ಷಣಗಳನ್ನು ಅನುಭವಿಸಿದ ಸಂತೃಪ್ತಿಯನ್ನು ಸಂಘದ ಕುಟುಂಬ ನನಗೆ ನೀಡಿದೆ. ನನ್ನ ಅಧ್ಯಕ್ಷ ಪದವಿಯು ಅತಿ ಶೀಘ್ರದಲ್ಲೆ ಮುಗಿಯಲಿದೆ, ಇನ್ನು ಮುಂದೆಯೂ ಕೂಡ ಎಲ್ಲರ ಸುಖದುಃಖಗಳಲ್ಲಿ ನನ್ನನ್ನು ಭಾಗಿಯಾಗಿಸಲು ನನ್ನ ಕಳಕಳಿಯ ವಿನಂತಿ. ತಿಳಿದು ಅಥವಾ ತಿಳಿಯದೆ ನನ್ನಿಂದ ತಪ್ಪಾಗಿದ್ದಲ್ಲಿ ಕ್ಷಮೆ ಕೇಳಿ ಎಲ್ಲರೂ ಸದಾ ಸುಖವಾಗಿರಲಿ ಎಂದು ಹಾರೈಸುತ್ತೇನೆ.

**ಅರವಿಂದ ಪಾಟೀಲ್**

ಅಧ್ಯಕ್ಷರು

ಕರ್ನಾಟಕ ಸಂಘ ,ಕತಾರ್



ಆತ್ಮೀಯರೇ,

ಪ್ರಥಮವಾಗಿ ತಮಗೆಲ್ಲರಿಗೂ ಗೌರವದ ವಂದನೆಗಳು. ವಿಶ್ವಕನ್ನಡ ಸಂಸ್ಕೃತಿ ಸಮ್ಮೇಳನದ ಪರಿಕಲ್ಪನೆ ಮೂಡಿ ಅದು ೨೦೦೪ರಲ್ಲಿ ಅಬುದಾಬಿ ಕನ್ನಡ ಸಂಘದ ಮೂಲಕ ಹೃದಯವಾಹಿನಿ ಪತ್ರಿಕಾ ಬಳಗ ಕಾರ್ಯರೂಪಕ್ಕೆ ತಂದಾಗ ಅದೊಂದು ಅದ್ಭುತವೆಂದು ಗುರುತಿಸಿಕೊಂಡಿತ್ತು. ಅದೇ ಪ್ರಕಾರವಾಗಿ ತಾವೂ ಕೂಡ ವಿಶೇಷ ಕಾಳಜಿ, ಶ್ರಮ ಮತ್ತು ಆತಿತ್ಯದ ಮೂಲಕ ಈ ಹಿಂದಿನ ಸಮ್ಮೇಳನಗಳನ್ನು ಮೀರಿಸುವ ಎಲ್ಲಾ ಪ್ರಯತ್ನವನ್ನು ಮಾಡಿದ್ದೀರಿ, ಅದು ಯಶಸ್ಸನ್ನೂ ಕಂಡಿದೆ. ಪಾಲ್ಗೊಂಡ ಸಾವಿರಾರು ಕನ್ನಡಿಗರು ಇದನ್ನು ಸಾಕ್ಷತ್‌ಕರಿಸಿದ್ದಾರೆ. ಈ ಎಲ್ಲಾ ಪ್ರಯತ್ನಗಳ ಹಿಂದೆ ತಮ್ಮ, ಶ್ರೀಯುತ ಮನ್ನಂಗಿ, ಶ್ರೀ ಸಂಜಯ್ ಕುದರಿ, ಶ್ರೀ ಸುಧಾಕರ್, ಶ್ರೀ ಮಧು, ಶ್ರೀ ಅರುಣ್ ಕುಮಾರ್, ಶ್ರೀ ಮಂಜುನಾಥ ಮೈಸೂರ್ ಹತ್ತು ಹಲವು ಕನ್ನಡಿಗರ ಪರಿಶ್ರಮ ಎದ್ದು ಕಾಣುತ್ತಿತ್ತು. ಹಲವರ ಹೆಸರನ್ನು ಇಲ್ಲಿ ಸೂಚಿಸಲು ಆಗುತ್ತಿಲ್ಲ. ಇದು ಕತಾರಿನ ಪ್ರತಿಯೊಬ್ಬ ಕನ್ನಡಿಗರಿಗೂ ಸಂದ ಗೌರವವೆಂದು ಭಾವಿಸುತ್ತೇವೆ. ಮುಂದೆ ವಿಶ್ವದ ಯಾವುದೇ ದೇಶದಲ್ಲಿ ಜರುಗಲಿರುವ ವಿಶ್ವ ಕನ್ನಡ ಸಂಸ್ಕೃತಿ ಸಮ್ಮೇಳನಗಳಿಗೆ ತಮ್ಮ ಸಹಕಾರ ಪ್ರೋತ್ಸಾಹ ಮುಂದುವರಿಸಬೇಕೆಂದು ಆತ್ಮೀಯವಾಗಿ ಕೇಳಿಕೊಳ್ಳುತ್ತೇವೆ.

ಗೌರವಗಳೊಂದಿಗೆ,

ಕೆ.ಪಿ. ಮಂಜುನಾಥ ಸಾಗರ್

ಸಂಪಾದಕರು, ಹೃದಯವಾಹಿನಿ ಮತ್ತು ಅಧ್ಯಕ್ಷರು ಸಮ್ಮೇಳನ ಸಮಿತಿ

---

ಆತ್ಮೀಯರೇ,

ನಿಜವಾಗಿಯೂ ಸಮ್ಮೇಳನದ ಸಂಘಟನೆ ಅತ್ಯುತ್ತಮವಾಗಿದ್ದು ಯಾರಿಗೂ ಯಾವ ತರಹದ ವಿಮರ್ಶೆಗಳಿಗೂ ಅವಕಾಶ ಮಾಡಿಕೊಡುವಂತಿರಲಿಲ್ಲ. ತಾಯ್ನಾಡಿನಿಂದ ಅತಿ ದೂರದಲ್ಲಿ ನೆಲಸಿದ್ದು ಇಂತಹಾ ಒಂದು ಉತ್ಕೃಷ್ಟ ಕಾರ್ಯಕ್ರಮ ಏರ್ಪಡಿಸುವುದೆಂದರೆ ಸುಲಭಸಾಧ್ಯದ ಕೆಲಸ ಖಂಡಿತಾ ಅಲ್ಲ. ಆದರೂ ಸಾಧ್ಯವಾಗಿಸಿದ್ದೀರಿ. ನಿಜವಾಗಿಯೂ ಮನ್ನಣೆಗೆ ಪ್ರಶಂಸೆಗೆ ಪಾತ್ರವಾದ ಸನ್ನಿವೇಶವಿದು.

ಈ ಸಮ್ಮೇಳನವನ್ನು ಅದ್ದೂರಿಯಾಗಿ, ಶ್ರೀಮಂತವಾಗಿ, ಜಯಪ್ರದವಾಗಿ ನೆರವೇರಲು ಪ್ರತ್ಯಕ್ಷವಾಗಿ ಪರೋಕ್ಷವಾಗಿ ಶ್ರಮಿಸಿದ ಪ್ರತಿಯೊಬ್ಬ ಕಾರ್ಯಕರ್ತರುಗಳಿಗೂ ನನ್ನ ವತಿಯಿಂದ ಹ್ರದಯಾಂತರಾಳದಿಂದ ಅಭಿನಂದನೆಗಳು. ಕತಾರ್ ಕನ್ನಡ ಸಂಘದಿಂದ ಇನ್ನಷ್ಟು, ಮತ್ತಷ್ಟು ಕನ್ನಡ ಕಾರ್ಯಕ್ರಮಗಳು ಸದಾಕಾಲ ಅಡೆತಡೆಗಳಿಲ್ಲದೇ ಹೊಮ್ಮಿಬರುತ್ತಿವಂತೆ ಸಮಸ್ತ ಕನ್ನಡಿಗರ ಸಹಕಾರ ಮಾತ್ರವಲ್ಲದೇ ಮಾತೆ ಭುವನೇಶ್ವರಿಯ ಅನುಗ್ರಹವೂ ನಿರಂತರ ಇರಲಿ ಎಂದು ಹಾರೈಸುತ್ತೇನೆ.

ತಮ್ಮೆಲ್ಲರಿಗೂ ಶುಭ ಹಾರೈಕೆಗಳೊಂದಿಗೆ,

ವಿಜಯ್ ಸುವರ್ಣ.



ಸಂಪಾದಕೀಯ.....

ಆತ್ಮೀಯ ಕನ್ನಡಿಗರೇ,

ಕತಾರಿನಲ್ಲಿ ೨೦೦೮ ರ ಡಿಸೆಂಬರ್ ತಿಂಗಳಲ್ಲಿ ನಡೆದ ಐದನೆಯ ವಿಶ್ವ ಕನ್ನಡ ಸಂಸ್ಕೃತಿ ಸಮ್ಮೇಳನದ ಯಶಸ್ಸಿಗಾಗಿ ಅಧ್ಯಕ್ಷರಾದ ಶ್ರೀ. ಅರವಿಂದ ಪಟೇಲರವರಿಗೆ ಸಂಘದ ಪರವಾಗಿ ಅಭಿನಂದನೆಗಳು.

ಈ ಸಮ್ಮೇಳನದಲ್ಲಿ ನಮ್ಮ ನಾಡಿನ ಅನೇಕ ಕಲೆಗಳನ್ನು ಕಣ್ಣಾರೆ ಕಾಣುವ ಸದವಕಾಶ ಕತಾರಿನ ಕನ್ನಡಿಗರಿಗೆ ಸಿಕ್ಕಿದ್ದು ನಿಜಕ್ಕೂ ಬಹಳ ಸಂತೋಷವನ್ನುಂಟು ಮಾಡಿದೆ. ನಮ್ಮಲ್ಲಿ ಬೇರೆ ರಾಜ್ಯದವರು ಹೆಚ್ಚಿನ ಸಂಖ್ಯೆಯಲ್ಲಿದ್ದರೂ, ಇಂತಹ ಅದ್ಭುತವಾದ ಸಮ್ಮೇಳನವನ್ನು ಮೊಟ್ಟಮೊದಲನೆಯದಾಗಿ ಕೆಚ್ಚೆದೆಯಿಂದ ಏರ್ಪಡಿಸಿ ಯಶಸ್ವಿಗೊಳಿಸಿರುವ ಖ್ಯಾತಿ ನಮ್ಮ ಸಂಘಕ್ಕೇ ಸಲ್ಲಬೇಕು. ಅದರಲ್ಲೂ ಕನ್ನಡದ ಧೀಮಂತ ಸಾಹಿತಿ ಪದ್ಮಶ್ರೀ ಡಾ. ಚಂದ್ರಶೇಖರ್ ಕಂಬಾರರು ಅಧ್ಯಕ್ಷತೆಯನ್ನು ವಹಿಸಿದ್ದು ಸಮ್ಮೇಳನಕ್ಕೆ ಮುಕುಟಪ್ರಾಯವಾಗಿತ್ತು.

ಈ ಸಂಚಿಕೆಯಲ್ಲಿ ಸಮ್ಮೇಳನದ ಕಾರ್ಯಕ್ರಮಗಳ ಆಯ್ದ ಚಿತ್ರಗಳನ್ನು ಪ್ರಕಟಿಸಲು ಯತ್ನಿಸಿದ್ದೇವೆ. ಏನಾದರೂ ಲೋಪಗಳಿದ್ದಲ್ಲಿ, ಅದು ಉದ್ದೇಶಪೂರ್ವಕವಲ್ಲ. ಈ ಸಂಚಿಕೆಯನ್ನು ಹೊರತರಲು ಸಹಕರಿಸಿ ಸಹಾಯ ಮಾಡಿದ ಶ್ರೀ. ಅರವಿಂದ ಪಾಟೀಲ್, ಶ್ರೀ. ಮನ್ನಂಗಿ, ಶ್ರೀ. ಪ್ರಭಾಕರ್, ಉಪಸಂಪಾದಕಿಯರಾದ ಶ್ರೀಮತಿ ರೂಪ, ಶ್ರೀಮತಿ ಲಕ್ಷ್ಮಿಯವರಿಗೆ, ಮತ್ತು ಜಾಹೀರಾತುಗಳನ್ನು ಒದಗಿಸಿದವರೆಲ್ಲರಿಗೂ ನನ್ನ ವಂದನೆಗಳು.

ಶುಭ ಹಾರೈಕೆಗಳೊಂದಿಗೆ

**ಸುಧಾ ಪ್ರಭಾಕರ -ಪ್ರಧಾನ ಸಂಪಾದಕಿ**

---




ಮೂರು ತಲೆಮಾರುಗಳ ಸಂಗೀತ ಪಯಣ - ವೇಣು ವಾದನ:



ಕ್ರೀಡೆ : ಮಹಿಳಾ ಥ್ರೋಬಾಲ್ ತಂಡ - ತುಳು ಕೂಟ ಕತಾರ್



ಮಹಿಳಾ ತಂಡ